

ಬೆನ್ನುಮೂಳೆಯ ಪಕ್ಕದಲ್ಲಿ ಬೆಳೆಯುವ ಗಡ್ಡೆಯಿಂದ ಕೆಲವೊಮ್ಮೆ ಬೆನ್ನುಮೂಳೆ ಅಸಹಜವಾಗಿ ಬೆಳೆದು ವಕ್ರವಾಗುತ್ತದೆ. ಶಸ್ತ್ರಚಿಕಿತ್ಸೆ ಮೂಲಕ ಇಂಥ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು.

# ಡೊಂಕಾದ ಬೆನ್ನುಮೂಳೆಗೆ ಚಿಕಿತ್ಸೆ ಏನು?

■ ಉಮಾ ಅನಂತ್

ನೈಜೀರಿಯಾ ಮೂಲದ ಹದಿನಾಲ್ಕು ವರ್ಷದ ಬಾಲಕಿ ಸಾರಾಳಿಗೆ ಆರು ತಿಂಗಳಿನಿಂದಲೂ ವಿಪರೀತ ಬೆನ್ನುನೋವು. ಅಲ್ಲೇ ವೈದ್ಯರ ಬಳಿ ತೋರಿಸಿದಾಗ ಸ್ಕ್ಯಾನಿಂಗ್ ಮಾಡಿಸಲು ಸೂಚಿಸಿದ ವೈದ್ಯರು ಇದರ ವರದಿ ನೋಡಿದಾಗ ಈಕೆಗೆ ಬೆನ್ನಿನ ಬಲಭಾಗದಲ್ಲಿ ಗಡ್ಡೆ ಬೆಳೆದದ್ದು ಪತ್ತೆಯಾಯಿತು. ಜೊತೆಗೆ ಬೆನ್ನುಮೂಳೆ ಡೊಂಕಾಗಿರುವುದು ತಿಳಿಯಿತು. ಅಲ್ಲದೆ ಬಲಭಾಗದ ಭುಜ ಎತ್ತರಕ್ಕೂ ಹೋಗಿತ್ತು. ಫಿಸಿಯೊಥೆರಪಿ ಮಾಡಿದರೂ ಪ್ರಯೋಜನವಾಗಲಿಲ್ಲ. ಜೊತೆಗೆ ಅಲ್ಲಿ ಸೂಕ್ತ ಪರಿಹಾರ ಸಿಗದೇ ಇರುವ ಕಾರಣ ಸಾರಾ ಪೋಷಕರು ಬೆಂಗಳೂರಿಗೆ ಚಿಕಿತ್ಸೆಗಾಗಿ ಕರೆತಂದರು. ಇಲ್ಲಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಸಂಪೂರ್ಣ ತಪಾಸಣೆ ನಡೆಸಿದರು. ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಈಕೆಯ ಬೆನ್ನುಮೂಳೆಯು ಸುಮಾರು 60 ಡಿಗ್ರಿಗೆ ಸರಿದಿದ್ದು ಗೊತ್ತಾಯಿತು.



ಸರ್ಜರಿ ಬಳಿಕ ಸಾರಾ ತನ್ನ ತಾಯಿಯೊಂದಿಗೆ.

ಅಸಹಜವಾಗಿ ಬೆಳೆದಿದ್ದ ಬೆನ್ನುಮೂಳೆಯನ್ನು ಆಸ್ಪತ್ರೆಯ ನರ ಶಸ್ತ್ರಚಿಕಿತ್ಸಾ ವಿಭಾಗದ ನಿರ್ದೇಶಕ ಡಾ. ರಾಜಕುಮಾರ್ ದೇಶಪಾಂಡೆ ಅವರ ನೇತೃತ್ವದ ತಂಡ ಶಸ್ತ್ರಚಿಕಿತ್ಸೆ ನಡೆಸಿ ಡೊಂಕಾದ ಬೆನ್ನುಮೂಳೆಯನ್ನು ಸರಿಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಬೆನ್ನುಮೂಳೆ ಡೊಂಕಾಗುವುದೇಕೆ?

‘ಇಂಥ ಪ್ರಕರಣಗಳು ಬಹಳ ಅಪರೂಪವಾದದ್ದು. ವೈದ್ಯಕೀಯ ಪರಿಭಾಷೆಯಲ್ಲಿ ಈ ಸಮಸ್ಯೆಯನ್ನು ‘ಸ್ಕೋಲಿಯೋಸಿಸ್’ ಎಂದು ಕರೆಯಲಾಗುತ್ತದೆ. ರೋಗಿಗೆ ಆನುವಂಶಿಕವಾಗಲಿ, ಹುಟ್ಟಿನಿಂದಾಗಲಿ ಯಾವುದೇ ಸಮಸ್ಯೆ ಇಲ್ಲದೆಯೂ ಬೆನ್ನುಮೂಳೆ ಡೊಂಕಾಗುತ್ತದೆ. ಸಾರಾ ಪ್ರಕರಣದಲ್ಲಿ ಈಕೆಯ ಸೊಂಟದ ಬಳಿ, ಬೆನ್ನುಮೂಳೆಯ ಸಮೀಪದಲ್ಲಿ ಗಡ್ಡೆಯೊಂದು ಬೆಳೆದಿತ್ತು. ಇದರಿಂದ ಬೆನ್ನಿನ ಮೂಳೆ ಡೊಂಕಾಗುವುದರ ಜೊತೆಗೆ ಭುಜವೂ ಎತ್ತರಕ್ಕೆ ಹೋಗಿತ್ತು. ಇಷ್ಟೇ ಅಲ್ಲದೆ ಬಾಲಕಿ ಮೈನರೆಯುವ ಸಮಯವೂ ಇದಾಗಿತ್ತು. ಹೀಗಾಗಿ ಸ್ತ್ರೀರೋಗ ತಜ್ಞರ ಸಹಾಯದಿಂದ ಈಕೆಯ ಋತುಚಕ್ರವನ್ನು ಮುಂದೂಡಿ ನಂತರ ಶಸ್ತ್ರಚಿಕಿತ್ಸೆ ನಡೆಸಬೇಕಾಯಿತು’ ಎಂದು ವಿವರ ನೀಡುತ್ತಾರೆ ಡಾ. ರಾಜಕುಮಾರ್ ದೇಶಪಾಂಡೆ.

‘ಡೊಂಕಾದ ಬೆನ್ನುಮೂಳೆಯ ಸಂಕೀರ್ಣ ಶಸ್ತ್ರಚಿಕಿತ್ಸೆಗಾಗಿ ಆ ಭಾಗದ 3ಡಿ ಚಿತ್ರಗಳನ್ನು ಒದಗಿಸುವ ‘ಒ’ ಆಕಾರದ ಇಂಟ್ರಾಆಪರೇಟಿವ್ ಇಮೇಜಿಂಗ್ ಸಿಸ್ಟಮ್ ಅನ್ನು ಬಳಸಿ ಶಸ್ತ್ರಚಿಕಿತ್ಸೆ ನಡೆಸಬೇಕಾಯಿತು. ಈ ಸರ್ಜರಿ ಮಾಡಲು ಸುಮಾರು ಎಂಟು ಗಂಟೆಗಳ ಕಾಲ ತೆಗೆದುಕೊಂಡಿತು, ಇಂಜೆಕ್ಷನ್, ಸೂಕ್ತ ಔಷಧೋಪಚಾರಗಳಿಂದಾಗಿ ಈಕೆಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂತು. ಕೆಲ ದಿನಗಳಲ್ಲೇ ಈಕೆ ಚೇತರಿಸಿಕೊಂಡ ಕಾರಣ ಮನೆಗೆ ಕಳಿಸಲಾಯಿತು’ ಎಂದು ಹೇಳುತ್ತಾರೆ ಈ ವೈದ್ಯರು.

‘ಕೆಲ ಮಕ್ಕಳಿಗೆ ಬೆನ್ನುಮೂಳೆ ಬಾಗಿರುತ್ತದೆ, ಮೂಳೆಯ ಅಸಹಜ ಬೆಳವಣಿಗೆಯಿಂದ ಬೆನ್ನುಮೂಳೆ ವಕ್ರವಾಗುತ್ತದೆ. ಸೆರೆಬ್ರಲ್ ಪಾಲ್ಸಿಯಂತಹ